**ಸಾಕ್ಷಿಯನ್ನು ದಿಃ 13.01.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಸಿ.ವಿ.ಎಸ್ ವಕೀಲರಿಂದಃ-**

ನಾನು ಕನ್ನಡ ಓದಲು ಬರಲ್ಲ ಎಂದು ಹೇಳಿದ್ದು, ಪ್ರಮಾಣ ವಚನವನ್ನು ನಾನು ಯಾರ ಸಹಾಯ ಇಲ್ಲದೆ ಓದಿರುತ್ತೇನೆ ಎಂದರೆ ಸರಿ. ಸಾಕ್ಷಿ ಪುನಃ ಅದು ಸಾಮಾನ್ಯವಾಗಿ ಕೇಳಿದ್ದನ್ನು ಓದಿರುತ್ತೇನೆ ಎನ್ನುತ್ತಾರೆ. ನಾನು ಈ ಕೇಸ್ ನಲ್ಲಿ ಅಗತ್ಯ ಪಕ್ಷಗಾರರನ್ನು ಮಾಡಿಲ್ಲ ಎಂದು ಹೇಳಿದ್ದು, ಸದರಿ ಅಗತ್ಯ ಪಕ್ಷಗಾರರು ಯಾರು ಎಂದು ಕೇಳಿದರೆ ಅದರ ಅರ್ಥವೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯನ್ನು ಖರೀದಿ ಮಾಡುವ 1 ತಿಂಗಳು ಮೊದಲು ಮಾತುಕತೆ ಆಗಿರಬಹುದು. ನಾನು ಆಸ್ತಿಯನ್ನು ಕೊಂಡುಕೊಳ್ಳುವ ಮೊದಲು ಆಸ್ತಿಗೆ ಯಾವ ಹಕ್ಕು ಪತ್ರಗಳನ್ನು ನೋಡಿದ್ದಿರಿ ಎಂದರೆ ಸಾಕ್ಷಿ ಲಾಯರ್ ಮೂಲಕ ಸದರಿ ದಾಖಲೆಗಳನ್ನು ನೋಡಿ ನಂತರ ರಿಜಿಸ್ಟರ್ ಮಾಡಿಸಿಕೊಂಡಿದ್ದೆವೆ ಎಂದು ನುಡಿಯುತ್ತಾರೆ. ಅಸ್ತಿಯನ್ನು ಖರೀದಿ ಮಾಡುವ ಮೊದಲು ಯಾವುದೆ ಮಾಧ್ಯಮದ ಮೂಲಕ ಪ್ರಚಾರ ಮಾಡಿರುವುದಿಲ್ಲ.

ನಾನು ಈ ಕೇಸ್ ನಲ್ಲಿ 2 ನೇ ಪ್ರತಿವಾದಿಯಾಗಿರುತ್ತೇನೆ. ಬೈರಪ್ಪನ ಹೆಂಡತಿ ಸ್ವಾಮ್ಯಾ ಎಂದರೆ ಯಾರು ಎಂಬ ಪ್ರಶ್ನೆಗೆ ಸಾಕ್ಷಿ ಸೌಮ್ಯ ಎಂಬುವ ಬದಲಾಗಿ ಸ್ವಾಮ್ಯಾ ಆಗಿರುತ್ತದೆ ಎಂದು ನುಡಿಯುತ್ತಾರೆ. ನ್ಯಾಯಾಲಯಕ್ಕೆ ಕೊಟ್ಟ ಪ್ರಮಾಣ ಪತ್ರದಲ್ಲಿ ತಿದ್ದುಪಡಿ ಕಾಣುತ್ತಿದ್ದು, ವಾದಿಗೆ ನೀಡಿರುವಂತಹ ಪ್ರತಿಯಲ್ಲಿ ಆ ರೀತಿಯ ತಿದ್ದುಪಡಿ ಕಾಣಿಸುತ್ತಿಲ್ಲ ಎಂದರೆ ಸರಿ. ಸದರಿ ಪ್ರಮಾಣ ಪತ್ರದಲ್ಲಿ ಬರೆದ ಇಂಗ್ಲೀಷ್ ಅರ್ಥ ಗರ್ಭಿತವಾಗಿಲ್ಲ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿ ನಮಗೆ ಮಾರಾಟ ಮಾಡಿದ ಬೋರೆಗೌಡ ರವರ ಆಸ್ತಿ ಸ್ವಯಾರ್ಜಿತ ಆಸ್ತಿ ಎಂದು ಹೇಳಿದ್ದು, ಆ ಬಗ್ಗೆ ಲಿಖಿತ ದಾಖಲೆಯನ್ನು ನಾನು ಪರಿಶೀಲಿಸಿದ್ದೆನೊ ಇಲ್ಲವೊ ನೆನಪಿಲ್ಲ, ಅದನ್ನು ವಕೀಲರು ಪರಿಶೀಲಿಸಿದ್ದಾರೆ ಎನ್ನುತ್ತಾರೆ. ಹಾಗೆ ಪರಿಶೀಲಿಸಿದ ಬಗ್ಗೆ ಲಿಖಿತ ದಾಖಲೆ ನನ್ನ ಬಳಿ ಇರುವುದಿಲ್ಲ. ಈ ನ್ಯಾಯಾಲಯದಲ್ಲಿ ದಾವಾ ಆಸ್ತಿಗಳನ್ನು ಮಾರಾಟ ಮಾಡಬಾರದೆಂದು ದಿಃ 01.07.2022 ರಂದು ತಡಯಾಜ್ಞೆ ನೀಡಿತ್ತು, ಆ ವಿಚಾರವನ್ನು ಬೋರೆಗೌಡ ರವರು ನಮಗೆ ಹೇಳಿಲ್ಲ. ಸದರಿ ವಿಚಾರವನ್ನು ನನಗೆ ಮರೆಮಾಚಿರುತ್ತಾರೆ ಎಂದರೆ ಸರಿಯಲ್ಲ.

ನನಗೆ ಕ್ರಯ ಆಗಿರುವುದು ದಿಃ 08.07.2022 ರಂದು ಎಂದರೆ ಸರಿ. ಅದಕ್ಕೂ ಮೊದಲೆ ದಿಃ 01.07.2022 ರಲ್ಲೆ ತಡಯಾಜ್ಞೆ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ವಾದಿಯ ತಂದೆ ತಾಯಿ 2020 ರಿಂದಲೂ ಪ್ರತ್ಯೇಕವಾಗಿ ವಾಸ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆಸ್ತಿಯನ್ನು ತೆಗೆದುಕೊಳ್ಳುವ ಕಾಲಕ್ಕೆ ಬೊರೇಗೌಡರು ತಮ್ಮ ಮಕ್ಕಳನ್ನು ಕರೆದುಕೊಂಡು ಕ್ರಯ ಪತ್ರ ಬರೆಸಿದ್ದು, ಆ ಸಮಯದಲ್ಲಿ ವಂಶವೃಕ್ಷ ಕೊಟ್ಟಿದ್ದರು ಎನ್ನುತ್ತಾರೆ. ಅಂತಹ ವಂಶವೃಕ್ಷವನ್ನು ನ್ಯಾಯಾಲಯಕ್ಕೆ ನಾನು ಕೊಟ್ಟಿರುವುದಿಲ್ಲ. ಸದರಿ ವಂಶವೃಕ್ಷದ ಜರಾಕ್ಸ್ ಪ್ರತಿ ನನ್ನ ಬಳಿ ಇರುತ್ತದೆ. ಬೊರೇಗೌಡರ ಮಕ್ಕಳಲ್ಲಿ ಸವಿತ ಎಂಬುವವರು ಇರುವುದಿಲ್ಲ ಎಂದು ಹೇಳಿದ್ದರು. ಕ್ರಯ ಪತ್ರ ಮಾಡುವ ಕಾಲಕ್ಕೆ ಸವಿತಾ ರವರ ಮಕ್ಕಳನ್ನು ಕರೆದಿದ್ದಿರಾ ಎಂದರೆ ಬೋರೆಗೌಡ ರವರೆ ಕರೆದುಕೊಂಡು ಬರುತ್ತೇನೆ ಎಂದು ಹೇಳಿದ್ದರು ಎನ್ನುತ್ತಾರೆ.

ಬೊರೇಗೌಡರ ಮಗ ಹರೀಶ್ ರವರು ವಾದಿಯ ತಾಯಿ ದೀಪಿಕಾ ರವರನ್ನು ಪ್ರೀತಿಸಿ ಮದುವೆ ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಅವರಿಬ್ಬರೂ ಬೆರೆ ಬೇರೆ ಜನಾಂಗದವರಾಗಿದ್ದು, ಇಬ್ಬರ ಮನೆಯಲ್ಲೂ ಅನುಸರನೆ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. 2022 ರ ನೇ ಸಾಲಿನಲ್ಲಿ ದೀಪಿಕಾ ಮತ್ತು ಹರೀಶ್ ರವರ ನಡುವೆ ಮನಸ್ತಾಪ ಜಾಸ್ತಿ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಜನವರಿ 2022 ರಲ್ಲಿ ಅದು ವಿಪರೀತ ಹಂತಕ್ಕೆ ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ. ಆಸ್ತಿಯಲ್ಲಿ ಪಾಲು ಕೊಡಬಾರದು ಎಂದು ಬೊರೇಗೌಡ ಮತ್ತು ಅವರ ಮಗ ಹರೀಶ್ ರವರು ತಡಯಾಜ್ಞೆಯನ್ನು ಮರೆಮಾಚಿ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅಸ್ತಿಯನ್ನು ಖರೀದಿ ಮಾಡುವ ಮೊದಲು ಮುನ್ನಚರಿಕೆಯಾಗಿ ನೋಡಬೇಕಾದ ದಾಖಲೆಯನ್ನು ನೋಡದೆ, ಅಸ್ತಿಯನ್ನು ಖರೀದಿ ಮಾಡಿದ್ದೇನೆ ಎಂದರೆ ಸಾಕ್ಷಿ ವಕೀಲರ ಅಭಿಪ್ರಾಯ ಪಡೆದು ಖರೀದಿ ಮಾಡಿದ್ದೇನೆ ಎಂದು ನುಡಿಯುತ್ತಾರೆ. ಸದರಿ ಸ್ವತ್ತನ್ನು ಸದುದ್ದೇಶದಿಂದ ಖರೀದಿ ಮಾಡಿಲ್ಲ, ನಾವು ಸದ್ಭಾವನೆ ಖರೀದಿದಾರರಲ್ಲ ಎಂದರೆ ಸರಿಯಲ್ಲ. ನಮಗೆ ದಾವೆ ಆಸ್ತಿಯಲ್ಲಿ ಯಾವುದೆ ಹಕ್ಕು ಬರುವುದಿಲ್ಲ, ಇತರೆ ಪ್ರತಿವಾದಿಯೊಂದಿಗೆ ಸೇರಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮುಖ್ಯ ವಿಚಾರಣಾ ಪ್ರಮಾಣ ಇಂಗ್ಲೀಷ್ ನಲ್ಲಿ ಇದ್ದು, ಅದನ್ನು ನನಗೆ ಕನ್ನಡದಲ್ಲಿ ತರ್ಜುಮೆ ಮಾಡಿ ಹೇಳಿದ್ದಾರೆ ಎಂಬ ಬಗ್ಗೆ

ದಾಖಲೆ ಹಾಕಿಲ್ಲ. ಖರೀದಿ ಮಾಡಿದ್ದೇನೆ ಎಂದು ಹೇಳಿರುವ ಆಸ್ತಿ ಒಟ್ಟು ಕುಟುಂಬ ಮತ್ತು ಪಿತ್ರಾರ್ಜಿತ ಆಸ್ತಿ ಆಗಿದ್ದು ಅದರಲ್ಲಿ ನನಗೆ ಯಾವುದೆ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿಗೆ ಮೋಸ ಮಾಡುವ ಉದ್ದೇಶದಿಂದ ಪ್ರತಿವಾದಿಗಳೊಂದಿಗೆ ಷಾಮಿಲಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡು, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸಾಕ್ಷಿಯೂ ಜೋರಾದ ಶಬ್ದದಿಂದ ನಾನೇಕೆ ಸುಳ್ಳು ಹೇಳಲಿ ಎಂದು ನುಡಿಯತ್ತಾರೆ. .

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)

1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್

ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.